ಅಧ್ಯಕ್ಷರು: ಇದೇನೆಂದು ಅರ್ಥವಾಗುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ: ಈಗ ತಾವು ಅಮೆಂಡ್‌ಮೆಂಟ್ ಮಾಡಲು ಪ್ರಯತ್ನ ಮಾಡಿ ಎಂದು ಹೇಳುತ್ತಿದ್ದೀರಿ, ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು: ತಮಗೆ ಒಂದೆರಡು ಉಪ ಪ್ರಶ್ನೆಗಳಲ್ಲಿ ಉತ್ತರ ಸಿಗದಿದ್ದರೆ ಬೇಕಾದರೆ ಅರ್ಧ ಗಂಟೆ ತೆಗೆದುಕೊಳ್ಳಿ. ಆದರೆ ಈ ರೀತಿ ದಯಮಾಡಿ ಮಾಡಬೇಡಿ. ತಾವು ಈ ರೀತಿ ಮಾಡಿದರೆ ಒಂದು ಗಂಟೆಯಾದ ತಕ್ಷಣ ಉಳಿದ ಪ್ರಶ್ನೆಗಳು ಲ್ಯಾಪ್ಸ್ ಆಗುತ್ತದೆ. ಕೆಲವರು ಪ್ರಶ್ನೆಗಳನ್ನು ಕೇಳಲು ಅವಕಾಶ ಸಿಗುವುದಿಲ್ಲ. ಈ ವಿಚಾರದಲ್ಲಿ ನಾನು ಮೊನ್ನೆಯೇ ಸ್ಪಷ್ಟ ಮಾಡಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಧರ್ಮೇಗೌಡರ ಪ್ರಶ್ನೆ ಇದ್ದರೂ ನನ್ನನ್ನು ತಾವು ಕರೆಯುತ್ತಿದ್ದೀರಿ.

ಅಧ್ಯಕ್ಷರು: ಅವರದ್ದಕ್ಕೆ ಉತ್ತರ ಬಂದಿಲ್ಲವೆಂದು ಹೇಳಿದೆನಲ್ಲಾ. ಮುಂದಿನ ದಿನಗಳಲ್ಲಿ ದಯವಿಟ್ಟು ಉತ್ತರವನ್ನು ಒದಗಿಸುತ್ತೇನೆ.

ಶ್ರೀ ಎಸ್.ಎಲ್. ಧರ್ಮೇಗೌಡ: ನಾನು ನಲವತ್ತು ಪ್ರಶ್ನೆ ಕೇಳಿದ್ದರೆ ಅಪ್ಪಿ ತಪ್ಪಿ ಒಂದು ಪ್ರಶ್ನೆ ಬಂದಿದೆ. ಅದಕ್ಕೂ ಉತ್ತರ ಕೊಡಲಿಲ್ಲವೆಂದರೆ ಹೇಗೆ? ಒಂದು ಸಣ್ಣ ಪ್ರಶ್ನೆ, ಬಹಳ ದೊಡ್ಡ ವಿಷಯವೇನಲ್ಲ.

ಅಧ್ಯಕ್ಷರು: ಮುಂದಿನ ದಿನಗಳಲ್ಲಿ ದಯವಿಟ್ಟು ಉತ್ತರವನ್ನು ಕೊಡಿಸುತ್ತೇನೆ.

ತುಮಕೂರು ಜಿಲ್ಲೆಯಲ್ಲಿ ಡ್ರಿಪ್ ಇರಿಗೇಷನ್ ಸಬ್ಸಿಡಿ

191(2728) ಶ್ರೀ ಮಾಧುಸ್ವಾಮಿ ಜೆ.ಸಿ. (ಚಿಕ್ಕನಾಯಕನಹಳ್ಳಿ): ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಈವರೆವಿಗೆ ಕೊಡಬೇಕಾಗಿರುವ ಡ್ರಿಪ್ ಇರಿಗೇಷನ್ ಸಬ್ಸಿಡಿ ಮೊತ್ತವೇನು (ತಾಲ್ಲೂಕುವಾರು ಮಾಹಿತಿ ನೀಡುವುದು);

ಆ) ಈ ಸಬ್ಸಿಡಿ ಹಣವನ್ನು ಬಾಕಿ ಇಟ್ಟು ಕೊಡದಿರಲು ಕಾರಣವೇನು;

ಇ) ಹಾಗಿದ್ದಲ್ಲಿ, ಯಾವಾಗ ವಿತರಿಸಲಾಗುವುದು?

ಶ್ರೀ ಆರ್. ಶ್ರೀನಿವಾಸ (ತೋಟಗಾರಿಕೆ ಸಚಿವರು):

ಅ) ತುಮಕೂರು ಜಿಲ್ಲೆಯಲ್ಲಿ ಹನಿ ನೀರಾವರಿ ಯೋಜನೆಯಡಿ ಈವರೆಗೆ ನೀಡಬೇಕಾಗಿರುವ ಸಬ್ಸಿಡಿ ಮೊತ್ತದ ತಾಲ್ಲೂಕುವಾರು ಮಾಹಿತಿ ಈ ಕೆಳಕಂಡಂತಿದೆ.

ಕ್ರ.ಸಂ.	ತಾಲ್ಲೂಕು	ಮೊತ್ತ (ರೂ.ಲಕ್ಷ)
1	ತುಮಕೂರು	30.00
2	ತಿಪಟೂರು	10.00
3	ಗುಬ್ಬಿ	80.00
4	ಕುಣಿಗಲ್	4.00
5	ತುರುವೇಕೆರೆ	19.27

6	ಚಿಕ್ಕನಾಯಕನಹಳ್ಳಿ	8.00
7	ಪಾವಗಡ	8.00
8	ಶಿರಾ	9.00
9	ಮಧುಗಿರಿ	4.00
10	ಕೊರಟಗೆರೆ	1.40
	ಒಟ್ಟು	173.67

ಆ) ಈ ವರ್ಷದ ಆರಂಭದಲ್ಲಿ ರೂ.230.53 ಲಕ್ಷಗಳ ಒಟ್ಟು 1852 ಫಲಾನುಭವಿಗಳ ಅರ್ಜಿಗಳು ಬಾಕಿ ಇದ್ದು ಇದರಲ್ಲಿ 560 ಅರ್ಜಿಗಳಿಗೆ ರೂ.56.86 ಲಕ್ಷಗಳನ್ನು ವಿತರಿಸಲಾಗಿದೆ. ಇನ್ನೂ ರೂ.173.67 ಲಕ್ಷಗಳ ಮೌಲ್ಯದ 1292 ಅರ್ಜಿಗಳು ಬಾಕಿ ಇವೆ.

ಇ) ಅಗತ್ಯವಿರುವ ಅನುದಾನ ಲಭ್ಯವಾದ ಕೂಡಲೇ ಸಬ್ಸಿಡಿ ಹಣವನ್ನು ವಿತರಿಸಲಾಗುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ: ಡ್ರಿಪ್ ಸಬ್ಸಿಡಿ ಎಷ್ಟು ಕೊಡಬೇಕಾಗಿತ್ತು ಎಂದು ಕೇಳಿದ್ದಕ್ಕೆ ಅವರು 173.67 ಲಕ್ಷ ರೂ. ತುಮಕೂರು ಜಿಲ್ಲೆಯೊಂದಕ್ಕೇ ಕೊಡಬೇಕಾಗಿತ್ತು ಎಂದು ಹೇಳುತ್ತಾರೆ. ನನಗೆ ತಿಳಿದ ಮಟ್ಟಿಗೆ ಇಡೀ ರಾಜ್ಯಕ್ಕೆ ಇದನ್ನು ಕೊಡಬೇಕೆಂದರೆ ಸುಮಾರು 20 ಕೋಟಿ ರೂ.ಯಾದರೂ ಕೊಡಬೇಕಾಗಿದೆ. ಇದು ಹೋದ ವರ್ಷದ್ದು. ಅದಾದಮೇಲೆ ತಾವು ಯಾವುದೇ ರೈತರಿಂದ ಡ್ರಿಪ್ ಇರಿಗೇಷನ್‌ಗೆ ಏನು ಸಬ್ಸಿಡಿಯನ್ನು ಕೊಡುತ್ತೇವೆ ಅದಕ್ಕೆ ಅರ್ಜಿಗಳನ್ನು ತೆಗೆದುಕೊಳ್ಳಬಾರದು ಎಂದು ಅರ್ಜಿಗಳನ್ನು ತೆಗೆದುಕೊಳ್ಳುವುದನ್ನೇ ನಿಲ್ಲಿಸಿಬಿಟ್ಟಿದ್ದೀರಿ. ಅಂಥ ಅರ್ಜಿ ಎಷ್ಟು ಇದೆ? ತಾವು ಅಸೆಂಬ್ಲಿಯಲ್ಲಿ ನಿಂತುಕೊಂಡು ಅನುದಾನವನ್ನು ನೋಡಿಕೊಂಡು ನಾವು ಕೊಡುತ್ತೇವೆಂದು ಉತ್ತರವನ್ನು ಕೊಟ್ಟರೆ, ಈಗಾಗಲೆ ಕಮಿಟ್‌ಮೆಂಟ್ ಆಗಿರುವುದಕ್ಕೆ, ಸಬ್ಸಿಡಿ ಬಿಲ್ಲು ಮಾಡಿ ಕಳುಹಿಸಿರುವುದಕ್ಕೆ, ಈ ಉತ್ತರವನ್ನು ನಿರೀಕ್ಷೆ ಮಾಡುವುದಕ್ಕೆ ನಾವು ಶಾಸನ ಸಭೆಯಲ್ಲಿ ಪ್ರಶ್ನೆ ಕೇಳಬೇಕಾ? ಏತಕ್ಕೆ ಕೊಟ್ಟಿಲ್ಲವೆಂದರೆ ಅನುದಾನವನ್ನು ನೋಡಿಕೊಂಡು ಉತ್ತರ ಕೊಡುತ್ತೇವೆಂದು ಮಂತ್ರಿಗಳು ಹೇಳಿದ್ದಾರೆ. ನಾನು ಮಾನ್ಯ ಸಿದ್ದರಾಮಯ್ಯನವರಿಗೆ ನೇರವಾಗಿ ಪ್ರಶ್ನೆ ಕೇಳಲು ಇಷ್ಟ ಪಡುತ್ತೇನೆ. ಅನುದಾನ ಕೊಡುತ್ತಾರೋ? ಇಲ್ಲವೋ?

ಶ್ರೀ ಆರ್. ಶ್ರೀನಿವಾಸ್ (ತೋಟಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರು ಪ್ರಶ್ನೆಯನ್ನೇನು ಕೇಳಿದ್ದಾರೆ ಅದಕ್ಕೆ ಉತ್ತರ ಕೊಟ್ಟಿದ್ದೇವೆ. ಉಳಿಕೆಯದನ್ನು ಕೊಡಲು ಸುಮಾರು ಹತ್ತು ಕೋಟಿ ರೂಪಯಿ ಬೇಕಾಗುತ್ತದೆ. 2004–05ಕ್ಕೆ 6 ಕೋಟಿ ರೂ. ಕೊಟ್ಟಿದ್ದರು, ಅದನ್ನೆಲ್ಲಾ ಪೂರ್ತಿಗೊಳಿಸಿ ಇನ್ನು ಉಳಿಕೆಯಾಗಿರುವುದಕ್ಕೆ ಸುಮಾರು ಹತ್ತು ಕೋಟಿ ರೂ. ಬೇಕಾಗುತ್ತದೆ. ಹಿಂದಿನ ಸಾಲಿನದಲ್ಲಿ ಇರುವುದಕ್ಕೆ ಮಾತ್ರ ಇದರಲ್ಲಿ ಅವಕಾಶವಾಗುತ್ತದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಈ ವರ್ಷ ಆಯವ್ಯಯದಲ್ಲಿ ಇಟ್ಟಿರುವುದೇ 6 ಕೋಟಿ ರೂ. ಅದರಲ್ಲಿ ವಿಶೇಷವಾಗಿ ಕೋಲಾರ ಜಿಲ್ಲೆ, ಬಿಜಾಪುರ ಜಿಲ್ಲೆಗೆ ನೂರು ಪರ್‌ಸೆಂಟ್ ಸಬ್ಸಿಡಿಯನ್ನು ಕೊಡಬೇಕು. ಡ್ರಿಪ್ ಇರಿಗೇಷನ್‌ಗೆ ನೂರು ಪರ್‌ಸೆಂಟ್ ಸಬ್ಸಿಡಿಯನ್ನು ಈ ಎರಡು ಜಿಲ್ಲೆಗೆ ವಿಶೇಷವಾಗಿ ಕೊಡಬೇಕು. ಅದನ್ನೂ ಸೇರಿ 6 ಕೋಟಿ ರೂ. ಇಟ್ಟಿರುವುದು. ಅದನ್ನು ಎಷ್ಟು ವರ್ಷಕ್ಕೆ ಕೊಡುತ್ತೀರಿ? ಕೊಡುತ್ತೀರೋ? ಇಲ್ಲವೋ? ಅದನ್ನಾದರೂ ಸ್ಪಷ್ಟವಾಗಿ ಹೇಳಿ.

ಶ್ರೀ ಆರ್. ಶ್ರೀನಿವಾಸ್: ಅವರು ಹೇಳುತ್ತಿರುವುದೂ ಸೂಕ್ತವಾಗಿದೆ. 6 ಕೋಟಿ ರೂ. ಅನುದಾನವನ್ನೇನು ಕೊಟ್ಟಿದ್ದಾರೆ ಅದರಲ್ಲಿ 100 ಪರ್‌ಸೆಂಟ್ ಆಗಬಹುದು, ಏನಾದರೂ ಆಗಬಹುದು, ಆದರೆ ನಾನು ಹಣವನ್ನು ಮಾತ್ರ ಎಲ್ಲಾ ಜಿಲ್ಲೆಗಳಿಗೂ ಸಮಾನವಾಗಿ ಹಂಚುತ್ತೇನೆ. ಏಕೆಂದರೆ ನೂರು ಪರ್‌ಸೆಂಟ್‌ಗೆ ಪ್ರತ್ಯೇಕವಾಗಿ ಹಣವನ್ನೇನೂ ಕೊಟ್ಟಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಕೋಲಾರ ಮತ್ತು ಬಿಜಾಪುರ Horticulture Districts ಎಂದು ಡಿಕ್ಲೇರ್ ಮಾಡಿ ಇವರು ಪಾಲಿಸಿ ಮಾಡುತ್ತಾರೆ. 100% Drip irrigationಗೆ ಕೊಡುತ್ತೇವೆ, underground waterನ್ನು ನಾವು ಹೆಚ್ಚು ಬಳಕೆ ಮಾಡಬಾರದು, ಮಿತ ಬಳಕೆ ಆಗಬೇಕೆಂದು ಹೇಳುತ್ತಾರೆ. 2003–04ಕ್ಕೆ ಅಪ್ಲಿಕೇಷನ್ ರಿಸೀವ್ ಮಾಡಿಕೊಳ್ಳಬೇಡಿ ಎಂದು ಸರ್ಕ್ಯುಲರ್ ಕಳುಹಿಸುತ್ತಾರೆ, ಆದರೆ ಇವರು ಈಗ ಸಮಾನವಾಗಿ ಹಂಚುವುದಾಗಿ ಹೇಳುತ್ತಾರೆ. ಹಾಗಾದರೆ Horticulture ಜಿಲ್ಲೆಗಳು ಯಾವುದು? Underground waterನ್ನು ಮಿತವಾಗಿ ಬಳಸಲು ಹಾಕಿರುವ ಸ್ಕೀಮ್ ಯಾವುದು? ಇವರ ಹತ್ತಿರ ಇರುವ ಹಣವೇನು? ಇದಕ್ಕೇನಾದರೂ ತಾಳ ಮೇಳ ಇದೆಯೇ? ವಿಧಾನಸಭೆಯೆಂದರೆ ಬಾಯಿಗೆ ಬಂದದ್ದನ್ನು ಹೇಳುತ್ತಿರುವುದೇ? ಏನೇನು ತೋಚಿದ್ದನ್ನೆಲ್ಲಾ ವಿಧಾನ ಸಭೆಯಲ್ಲಿ ರೈಲು ಬಿಡುತ್ತಿರುವುದೆ? ಇದನ್ನು ವಿಧಾನ ಸಭೆಯೆಂದು ಕರೆಯುವುದು ಬೇಡ, ರೈಲ್ವೇ ಸ್ಟೇಷನ್ ಎಂದು ಕರೆಯೋಣ, ಇವರು 'ಕೂ ಕೂ' ಎಂದು ರೈಲನ್ನು ಬಿಡಲಿ! There should be some sense. What does he mean? 2003–04ಕ್ಕೆ ಅಪ್ಲಿಕೇಷನ್‌ಗಳನ್ನು ತೆಗೆದುಕೊಳ್ಳಬಾರದು ಎಂದು ಹೇಳುತ್ತಾರೆ, ಕೋಲಾರ ಜಿಲ್ಲೆಯಲ್ಲಿರುವ ರೈತ ಏನು ಮಾಡಬೇಕು? ಎಲ್ಲಿಗೆ ಹೋಗಬೇಕು? ಇವರು ಎಷ್ಟು ಸಬ್ಸಿಡಿ ಕೊಟ್ಟಿದ್ದಾರೆ? It is his duty to fight for the subsidy. ಇವರಿಗೆ ಅನುದಾನ ಸಿಕ್ಕಿಲ್ಲವೆಂದು ನಮಗೆ ಹೇಳುತ್ತಾರಾ?

ಶ್ರೀ ಆರ್. ಅಶೋಕ್: ಮೂರು ವರ್ಷಗಳ ಹಿಂದೆ ಅರ್ಜಿ ಹಾಕಿರುವುದಕ್ಕೂ ಇನ್ನೂ ಕ್ಲಿಯರ್ ಆಗಿಲ್ಲ. ಬಜೆಟ್‌ನಲ್ಲಿ ಇಸ್ರೇಲ್ ಮಾದರಿ ತಂತ್ರಜ್ಞಾನ ತರುತ್ತೇನೆಂದು ಹೇಳುತ್ತಾರೆ. ಸದ್ಯಕ್ಕೆ ಇಂಡಿಯಾ ಮಾದರಿಗೇ ಕೊಡಲು ಇವರ ಹತ್ತಿರ ಹಣ ಇಲ್ಲ. ಇನ್ನು ಇಸ್ರೇಲ್ ಮಾದರಿ ತಂತ್ರಜ್ಞಾನವನ್ನು ತಂದರೆ ಸಬ್ಸಿಡಿಯನ್ನು ಎಲ್ಲಿಂದ ಕೊಡುತ್ತಾರೆ?

ಅಧ್ಯಕ್ಷರು: ಆ ವಲಯಕ್ಕೆ ಎಷ್ಟು ಆದ್ಯತೆಯನ್ನು ಕೊಟ್ಟು ಹಣಕಾಸನ್ನು ಒದಗಿಸಬೇಕು..

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: 6 ಕೋಟಿ ರೂ. ಯನ್ನು ಇಟ್ಟುಕೊಂಡು ಏನು ತಾನೇ ಮಾಡುವುದು?

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: ಎರಡು ವರ್ಷದ ಹಿಂದಿನದನ್ನೇ ಕೊಟ್ಟಿಲ್ಲ. ಈ ವರ್ಷದನ್ನು ಹೇಗೆ ಕೊಡುತ್ತಾರೆ?

SRI K.R.RAMESH KUMAR:- Why do you pronounce the policy? ಃ ಹಾಗಾದರೆ ಪಾಲಿಸಿಯನ್ನೇಕೆ ಮಾಡಿದರು?

ಅಧ್ಯಕ್ಷರು: ಪ್ರಶ್ನೋತ್ತರ ಸಮಯದಲ್ಲಿ ಏನೇನು ಕೇಳಿದ್ದೀರಿ ಇದರಿಂದ ಏನಾದರೂ ಸಮಸ್ಯೆಯನ್ನು ಬಗೆಹರಿಸಲು ಆಗುತ್ತದೆಯೆ?

ಶ್ರೀ ಜೆ.ಸಿ. ಮಾಧುಸ್ವಾಮಿ: ಅದಕ್ಕೇ ನಾವು ಶೂನ್ಯವೇಳೆಯಲ್ಲಿ ಎತ್ತಲಿಲ್ಲ. ಪ್ರಶ್ನೋತ್ತರದಲ್ಲಿ ಕೇಳಲಾಗಿದೆ.

ಅಧ್ಯಕ್ಷರು: ಈ ವಲಯಕ್ಕೆ ಸಬ್ಸಿಡಿ ಹಣವನ್ನು ಜಾಸ್ತಿ ಕೊಡಬೇಕಾಗುತ್ತದೆ, ಜಾಸ್ತಿ ಹಣವನ್ನು ಇಡಬೇಕಾಗುತ್ತದೆ. ಮಾನ್ಯ ಅರ್ಥ ಸಚಿವರು ಇದ್ದರೆ ಉಪಯೋಗವಾಗುತ್ತಿತ್ತು. ಅವರೂ ಇಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಸಾಕಷ್ಟು ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಳ್ಳದೆಯೇ ಇವರು ಪಾಲಿಸಿಯನ್ನು ಡಿಕ್ಲೇರ್ ಮಾಡಿ ಜನರನ್ನು ತಪ್ಪುದಾರಿಗೆ ಎಳೆದರೆ ಹೌಸನ್ನು ಕಂಟೆಂಮ್ಟ್ ಮಾಡಿದ್ದಾರೆಂದು ಜಾರ್ಜ್ ಮಾಡಬೇಕಾಗುತ್ತದೆ. It is not that easy. Can you mislead the House? It is a serious charge.

ಶ್ರೀ ಬಿ.ಎಸ್. ಯಡಿಯೂರಪ್ಪ: ಬಿಜಾಪುರ ಮತ್ತು ಕೋಲಾರ ಜಿಲ್ಲೆಗೆ ನೂರು ಪರ್‌ಸೆಂಟ್ ಸಬ್ಸಿಡಿಯನ್ನು ಕೊಡುತ್ತೇವೆಂದು ಎರಡು ಮೂರು ವರ್ಷಗಳಿಂದ ಹೇಳಿಕೊಂಡು ಬಂದರು, ಆದರೆ ಇದುವರೆಗೆ ಕೊಟ್ಟಿಲ್ಲ. ಸಚಿವರೇ ಭಿನ್ನವಾದ ಹೇಳಿಕೆಯನ್ನು ಆ ಜಿಲ್ಲೆಯಲ್ಲಿ ಕೊಟ್ಟಿರುವುದನ್ನು ಪೇಪರ್ ಕಟ್ಟಿಂಗ್ಸ್‌ನ್ನು ತಮಗೆ ತರಿಸಿಕೊಡುತ್ತೇನೆ. ಎರಡನೆಯದು, ಅಂತರ್ಜಲ ಕುಸಿದುಹೋಗುತ್ತಿರಬೇಕಾದರೆ ಇದಕ್ಕೆ ಹೆಚ್ಚು ಉತ್ತೇಜನವನ್ನು ಕೊಡಬೇಕು, ಗರಿಷ್ಟವಾದ ಉತ್ತೇಜನವನ್ನು ಕೊಡಬೇಕು, 50 ಕೋಟಿ ರೂ. ಇದಕ್ಕೆ ತೆಗೆದಿಟ್ಟಿದ್ದರೂ ಕಡಿಮೆಯೇ, ರೈತರಿಗೆ ಕಡಿಮೆ ನೀರಿನಲ್ಲಿ ಉತ್ಪನ್ನ ಮಾಡುವುದಕ್ಕೆ ವಿಶೇಷವಾದ ವಿನೂತನವಾದ ಮಾರ್ಗ. ತಾವು ಹೋದ ವರ್ಷದನ್ನೇ ಕೊಡದೆ ಪೆಂಡಿಂಗ್ ಬಿಲ್ಲನ್ನು ಇಟ್ಟುಕೊಂಡು ಈ ವರ್ಷ ಕೊಡುವುದು ಇನ್ನೆಲ್ಲಿ? 2004–05ರಲ್ಲಿ ನೀವು ಏನೂ ಕೊಟ್ಟಿಲ್ಲ. ಅಂದರೆ ಎಲ್ಲಿಗೆ ಹೋಗಿ ಮುಟ್ಟುತ್ತೇವೆ? ತೋಟಗಾರಿಕೆ ಇಲಾಖೆಯ ಮಂತ್ರಿಗಳನ್ನು ದೂಷಣೆ ಮಾಡುವುದಲ್ಲ. ನೀವು ಹೋರಾಟ ಮಾಡಿ ಫಂಡ್ಸ್ ಕೊಡುವ ಹಾಗೆ ಮಾಡಬೇಕು, ಅದಕ್ಕೆ ತಾನೇ ನಿಮ್ಮನ್ನು ಮಂತ್ರಿಯನ್ನಾಗಿ ಮಾಡಿರುವುದು. ತಾವು ಇನ್‌ಎಬಿಲಿಟಿಯನ್ನು ವ್ಯಕ್ತ ಮಾಡಿದರೆ ನಾನು ಏನು ಮಾಡಬೇಕು ಹೇಳಿ?

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಯವರನ್ನು ಇಲ್ಲಿಗೆ ಕರೆಸಿಬಿಡಿ, ಆಗ ಕೇಳುತ್ತೇವೆ, ಪಾಪ ಅವರಿಗೇಕೆ..ಗಿಂಜೋದು.

ಅಧ್ಯಕ್ಷರು: ಉಪ ಮುಖ್ಯಮಂತ್ರಿಯವರನ್ನು ಕರೆಸಿ. ಅವರು ಬಂದರು. ನೀವು ಆ ಕಡೆ ಹೊರಟು ಹೋಗುತ್ತೀರಿ. ಇಲ್ಲೆಲ್ಲಾ ಗಲಾಟೆಯಾಗಿ ಕೂತಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅವರು ಬಂದರು. ಮಾನ್ಯ ಸಿದ್ದರಾಮಯ್ಯನವರೆ, ಹನಿನೀರಾವರಿಗೆ ನಮಗೆ ಎರಡು ವರ್ಷದಿಂದ ಸಬ್ಸಿಡಿ ಬಾಕಿ ಇರುವುದು ಎಷ್ಟು ಎಂದು ಕೇಳಿದ್ದೆವು, ಅವರ ಪ್ರಕಾರ ಹತ್ತು ಕೋಟಿ ರೂ. ಬಾಕಿ ಇದೆ. ಈ ವರ್ಷ ಕೂಡ ಕೇವಲ 6 ಕೋಟಿ ರೂ ಇಟ್ಟಿದ್ದೀರಿ, ಕಳೆದ ವರ್ಷದ್ದು ಮತ್ತು ಅದರ ಹಿಂದಿನ ವರ್ಷದ ಬಾಕಿಗೆ 8 ಕೋಟಿ ರೂ. ಬೇಕು, ಹೋದ ವರ್ಷ ಒಂದೇ ಒಂದು ಅಪ್ಲಿಕೇಷನ್‌ನನ್ನು ಅವರು ತೆಗೆದುಕೊರಡಿಲ್ಲ. ನಮ್ಮ ಭಾಗದಲ್ಲಿ ತೆಂಗಿನ ಗಿಡಗಳಿವೆ. ನಾವೆಲ್ಲರೂ ಇವ್ವೊತ್ತು ಹನಿ ನೀರಾವರಿ ಅಳವಡಿಸಿಕೊಳ್ಳದೆ ಗತ್ಯಂತರವಿಲ್ಲ. "ನನಗೆ ಇರುವುದು ಆರು ಕೋಟಿ ರೂ. ಮಾತ್ರ. ಮತ್ತು ಹತ್ತು ಕೋಟಿ ರೂಪಾಯಿಗಳಷ್ಟು ಪೆಂಡಿಂಗ್ ಬಿಲ್ಸ್ ಇದೆ, ನಾನು ಅಸಹಾಯಕ" ಎಂದು ಮಾನ್ಯ ಮಂತ್ರಿಗಳು ಸಭೆಯಲ್ಲಿ ನೇರವಾಗಿ ತಿಳಿಸಿದ್ದಾರೆ. ಈ ದಿಸೆಯಲ್ಲಿ ತಾವೇನಾದರೂ ನಮ್ಮ ಸಹಾಯಕ್ಕೆ ಬಂದು ಉತ್ತರಿಸುತ್ತೀರಾ ಎಂದು ತಮ್ಮ ಮೂಲಕ

ಸಚಿವರನ್ನು ಕೇಳಬಯಸುತ್ತೇನೆ. ದಯಮಾಡಿ 2–3 ವರ್ಷಗಳಿಂದ ಬಾಕಿ ಇರುವ ಸಬ್ಸಿಡಿಯನ್ನು ರೈತರಿಗೆ ಒದಗಿಸಿಕೊಡದಿದ್ದರೆ, ಅವರ ಗತಿ ಏನಾಗಬೇಕು? ಇದಕ್ಕೆ ತಾವೇ ಉತ್ತರ ಹೇಳಬೇಕು. ಪ್ರಸಕ್ತ ವರ್ಷಕ್ಕೆ ಆರು ಕೋಟಿ ರೂಪಾಯಿಗಳನ್ನು ಮಾತ್ರ ಪ್ರಾವಿಜನ್ ಮಾಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಇಡೀ ರಾಜ್ಯದಲ್ಲಿ ಹನಿ ನೀರಾವರಿಗೆ ಸಂಬಂಧಿಸಿದಂತೆ ನೀಡಬೇಕಾಗಿರುವ ಸಬ್ಸಿಡಿ ಕಳೆದ ವರ್ಷದಿಂದ ಬಾಕಿ ಇದೆ. ಈ ವರ್ಷ ನಾವೇನೂ ಮಾಡುವುದಕ್ಕಾಗಲಿಲ್ಲ, ಮತ್ತು ಅರ್ಜಿಗಳನ್ನು ತೆಗೆದುಕೊಳ್ಳಬಾರದೆಂದು ಹೇಳಿದ್ದಾರೆ. ಆದರೆ, ಬಜೆಟ್ ಭಾಷಣದಲ್ಲಿ ಹನಿ ನೀರಾವರಿಗೆ ಹೆಚ್ಚಿಗೆ ಆದ್ಯತೆ ನೀಡಲಾಗುವುದೆಂದು ಪ್ರಸ್ತಾಪಿಸಿದ್ದಾರೆ. ಬಾಕಿ ಇರುವ ಎಲ್ಲಾ ಹಣ ಕನಿಷ್ಠವೆಂದರೂ 10ರಿಂದ 12 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಕಳೆದ ವರ್ಷವೂ ಕೊಟ್ಟಿಲ್ಲ. ಇನ್ನು ಮುಂದಾದರೂ, ಅಂತರ್ಜಲ ಕುಸಿಯುತ್ತಿರುವ ಈ ಸಂದರ್ಭದಲ್ಲಿ ಹನಿ ನೀರಾವರಿ ಮೂಲಕ ಬೆಳೆ ಬೆಳೆಯಬೇಕಾಗುತ್ತದೆ. ಹಳೆಯ ಬಾಕಿ ತೀರಿಸುವ ಮೂಲಕ ಈ ವರ್ಷವಾದರೂ ಸಾಕಾಗುವಷ್ಟು ಹಣ ಒದಗಿಸಿಕೊಡುತ್ತೀರಾ ಎನ್ನುವುದಷ್ಟೇ ನನ್ನ ಪ್ರಶ್ನೆಯಾಗಿದೆ.

ಶ್ರೀ ಜಿ.ಎ. ಶ್ರೀರಾಮರೆಡ್ಡಿ: ಸದನದಲ್ಲಿ ಹಣಕಾಸು ಮಂತ್ರಿಗಳಾದ ಸಿದ್ದರಾಮಯ್ಯನವರಿದ್ದಾರೆ. ಅವರು ಆಯವ್ಯಯದಲ್ಲಿ ಆರು ಕೋಟಿ ರೂಪಾಯಿಗಳನ್ನು ನಿಗದಿಪಡಿಸಿದ್ದರೂ ಹೆಚ್ಚಿಗೆ ಹಣ ಹೇಗೆ ಕೊಡುತ್ತಾರೆ? ನೀವು ಕೊಟ್ಟಿರುವುದು ಆರು ಕೋಟಿ ರೂಪಾಯಿಗಳು ಮಾತ್ರ. ಅವರು ಹೇಳಿದ್ದಾಯಿತು, ಈಗ ದಯವಿಟ್ಟು ನೀವು ಹೇಳಬೇಕು.

ಶ್ರೀ ಆರ್.ಅಶೋಕ್: ಮಾನ್ಯ ಮಂತ್ರಿಗಳು ಮಾತನಾಡುತ್ತಾ, ನನ್ನ ಹತ್ತಿರ ಇರುವುದು ಆರು ಕೋಟಿ ರೂ. ಮಾತ್ರ. ಅದನ್ನೇ ಎಲ್ಲಾ ಜಿಲ್ಲೆಗಳಿಗೂ ಹಂಚುತ್ತೇನೆಂದು ತಿಳಿಸಿದ್ದಾರೆ.

ಶ್ರೀ ಸಿದ್ದರಾಮಯ್ಯ: ನೀವು ಯಾವ ತೆಂಗಿನ ತೋಟ ಬೆಳೆದಿದ್ದೀರಿ? ಕುಳಿತುಕೊಳ್ಳಿ.

ಶ್ರೀ ಆರ್.ಅಶೋಕ್: ನಾನು ಸ್ವತಃ ಬೆಳೆಯುತ್ತೇನೆ. ಅದೇ ಕೆಲಸ ಮಾಡುತ್ತೇನೆ. ಅದರ ಬಗ್ಗೆ ಯಾವ ಮಾಹಿತಿ ಬೇಕೋ, ಕೇಳಿ, ಬಾಳೆತೋಟ ಮತ್ತು ತೆಂಗಿನ ತೋಟದ ಬಗ್ಗೆ ನಾನು ಹೇಳುತ್ತೇನೆ. ನೀವು ತೋಟಕ್ಕೆ ಹೋಗಿಲ್ಲ. ಆದರೆ, ನಾನು ಬೆಳೆಯುತ್ತೇನೆ. ನಾನು ಆ ಸಮುದಾಯದಿಂದಲೇ ಬಂದವನು. ನೀವು ಯಾವ ತೆಂಗಿನ ತೋಟ ಬೆಳೆದಿದ್ದೀರೆಂದು ಹೇಳಿದಿರಲ್ಲಾ, ನಾನು ಅದೇ ಕೆಲಸ ಮಾಡುವವನು. ನಾನು ಇವೊತ್ತು ಬೆಂಗಳೂರಿನಲ್ಲಿರಬಹುದು. ಇವೊತ್ತಿಗೂ ನಾನು ಆ ಕೆಲಸ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು):– ಹಾಗಾದರೆ, ಬಹಳ ಸಂತೋಷ. ನೀವೇನೂ ಬೆಳೆದಿಲ್ಲವೆಂದು ನಾನು ಅಂದುಕೊಂಡಿದ್ದೆ. ಇವರಿಗೆ ಯಾವುದೇ ತೆಂಗಿನ ತೋಟ ಇಲ್ಲವೆಂದು ತಿಳಿದಿದ್ದೆ. ಇದ್ದರೆ, ಬಹಳ ಸಂತೋಷ. ನನ್ನ ಬಳಿ ಆ ಬಗ್ಗೆ ತಪ್ಪು ಮಾಹಿತಿ ಇತ್ತೆಂದು ಅನಿಸುತ್ತದೆ. ಇದ್ದರೆ, ಬಹಳ ಸಂತೋಷ. ಮಾನ್ಯ ಅಧ್ಯಕ್ಷರೆ, ಆರ್.ಐ.ಡಿ.ಎಫ್.ನಲ್ಲಿ ಆರೂವರೆ ಕೋಟಿ ರೂಪಾಯಿಗಳಿವೆ. ಕೋಲಾರ, ಬಿಜಾಪುರಕ್ಕೆ ಈ ವರ್ಷ ನೂರರಷ್ಟು ಸಬ್ಸಿಡಿ ಕೊಡಬೇಕೆಂದಿತ್ತು. ಅದನ್ನು ಮುಂದಿನ ವರ್ಷಕ್ಕೂ ಕೂಡ ತೀರ್ಮಾನ ಮಾಡಿದ್ದೇವೆ. ಬೇರೆ ಜಿಲ್ಲೆಗಳಿಗೆ ಶೇಕಡ ಐವತ್ತರಷ್ಟು ಸಬ್ಸಿಡಿ ಕೊಡಬೇಕೆಂದು ಈ ವರ್ಷದ ಬಜೆಟ್‌ನಲ್ಲಿ ನಾನು ಪ್ರಸ್ತಾಪಿಸಿದ್ದೇನೆ. ಬಾಕಿ ಯಾವುದು ಇದೆಯೆಂಬ ಬಗ್ಗೆ ಸಂಬಂದಪಟ್ಟ ಇಲಾಖೆಯವರು ಪ್ರಸ್ತಾವನೆ ಕಳುಹಿಸಿಕೊಟ್ಟರೆ, ಅದನ್ನು ಪರಿಶೀಲಿಸಿ ಸಮಸ್ಯೆ ಬಗೆಹರಿಸುವ ಕೆಲಸ ಮಾಡುತ್ತೇನೆ. ಅದೇ ರೀತಿ ಹೊಸದಕ್ಕೂ ಎಷ್ಟು ಬೇಕೋ ಅಷ್ಟು

ಕ್ಕೊಡುತ್ತೇವೆ. ಈಗ ಆರು ಕೋಟಿ ರೂ. ಇದೆಯೆಂದು ಹೇಳಿದ್ದು, ಆರ್.ಐ.ಡಿ.ಎಫ್.ನಲ್ಲೂ ಆರೂವರೆ ಕೋಟಿ ರೂಪಾಯಿಗಳಷ್ಟು ಇರುತ್ತದೆ. ಇದಕ್ಕಿಂತಲೂ ಇನ್ನೂ ಹೆಚ್ಚಿಗೆ ಬೇಕಾಗಿದ್ದರೆ, ಒಂದು ಕಾರ್ಯಕ್ರಮ ಪ್ರಕಟಿಸಿದ್ದೇವೆ, ಅದರಂತೆ ಕೋಲಾರ ಮತ್ತು ಬಿಜಾಪುರ ಜಿಲ್ಲೆಗಳಿಗೆ ನೂರರಷ್ಟು ಸಬ್ಸಿಡಿ ಒದಗಿಸಿಕೊಡುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇದುವರೆಗೆ ಒಬ್ಬರಿಗೂ ಒದಗಿಸಿಕೊಟ್ಟಿಲ್ಲ.

ಶ್ರೀ ಸಿದ್ದರಾಮಯ್ಯ: ಕೊಡುತ್ತೇವೆಂದು ಹೇಳಿದ್ದೇವೆ. ಕೊಟ್ಟಿಲ್ಲವೆಂದರೆ ಏನರ್ಥ? ಈ ಕುರಿತಂತೆ ಸಂಬಂಧಪಟ್ಟ ಅಧಿಕಾರಿಗಳ ಸಭೆ ಕರೆದು ಮತ್ತು ಸಂಬಂಧಿಸಿದ ಮಂತ್ರಿಗಳೊಂದಿಗೆ ಚರ್ಚಿಸಿ ಯಾವುದಕ್ಕೆ ಕೊಟ್ಟಿಲ್ಲ ಹಾಗೂ ಯಾವುದಕ್ಕೆ ಕೊಟ್ಟಿದೆ ಎಂಬ ವಿಷಯಗಳನ್ನು ವಿಷದವಾಗಿ ನೋಡಿ ನಂತರ ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಶೇಕಡ ಐವತ್ತರಷ್ಟು ಹಣವನ್ನು ಕೊಡುವುದಾಗಿ ಹೇಳುತ್ತೀರಾ?

ಶ್ರೀ ಸಿದ್ದರಾಮಯ್ಯ: ಎಲ್ಲರಿಗೂ ಕೊಡುತ್ತೇವೆ.

ಶ್ರೀ ಗೋವಿಂದಪ್ಪ ಮಕಟಪ್ಪ ಕಾರಜೋಳ: ಅದರಲ್ಲಿ ಬಾಗಲಕೋಟೆ ಜಿಲ್ಲೆಯನ್ನೂ ಸೇರಿಸಬೇಕು.

ವಿಷಯ:– ರಾಜ್ಯದಲ್ಲಿ ನಷ್ಟಕ್ಕೊಳಗಾಗಿರುವ ಜಿಲ್ಲಾ ಕೇಂದ್ರ ಬ್ಯಾಂಕುಗಳು

192(2212) ಶ್ರೀ ಪಾಟೀಲ್ ಬಿ.ಆರ್.(ಆಳಂದ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಷ್ಟಕ್ಕೊಳಗಾಗಿ ನಿಷ್ಕ್ರಿಯವಾಗಿರುವ ಜಿಲ್ಲಾ ಕೇಂದ್ರ ಬ್ಯಾಂಕುಗಳೆಷ್ಟು?

ಆ) ಇವುಗಳಿಂದ ಸಹಕಾರ ಸಂಸ್ಥೆಗಳಿಗೆ ಸಾಲ ಕೊಡಲು ಸಾಧ್ಯವಾಗಿದೆಯೆ?

ಇ) ಹಾಗಿಲ್ಲದಿದ್ದಲ್ಲಿ, ಎಷ್ಟು ವರ್ಷಗಳಿಂದ ಈ ಸಂಸ್ಥೆಗಳು ಸಾಲ ಕೊಡುವುದನ್ನು ನಿಲ್ಲಿಸಿವೆ?

ಈ) ಇವುಗಳ ಪುನಃಶ್ಚೇತನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು):

ಅ) ರಾಜ್ಯದಲ್ಲಿ ನಷ್ಟಕ್ಕೊಳಗಾಗಿ ನಿಷ್ಕ್ರಿಯವಾಗಿರುವ ಜಿಲ್ಲಾ ಕೇಂದ್ರ ಬ್ಯಾಂಕುಗಳು ಯಾವುದೂ ಇರುವುದಿಲ್ಲ.

ಆ) ನಷ್ಟಕ್ಕೊಳಗಾಗಿರುವ ಜಿಲ್ಲಾ ಬ್ಯಾಂಕುಗಳು ಸಾಲವನ್ನು ನೀಡುತ್ತಿವೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಬಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ "ರಾಜ್ಯದಲ್ಲಿ ನಷ್ಟಕ್ಕೊಳಗಾಗಿ ನಿಷ್ಕ್ರಿಯವಾಗಿರುವ ಜಿಲ್ಲಾ ಕೇಂದ್ರ ಬ್ಯಾಂಕುಗಳು ಯಾವುದೂ ಇರುವುದಿಲ್ಲ" ಎಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಈ ಸದನದಲ್ಲಿ ಸದಸ್ಯರಾಗಿರುವವರೊಬ್ಬರು ಅಪೆಕ್ಸ್ ಬ್ಯಾಂಕ್‌ನ ಅಧ್ಯಕ್ಷರಾಗಿದ್ದಾರೆ. ಕೋಲಾರ ಮತ್ತು ಧಾರವಾಡ ಜಿಲ್ಲಾ ಕೇಂದ್ರ ಬ್ಯಾಂಕುಗಳು ಇವೊತ್ತು ರೋಗಗ್ರಸ್ತವಾಗಿವೆ. ಸಹಕಾರ ಕ್ಷೇತ್ರದಲ್ಲಿ ಅನುಭವವಿರುವ ಸಚಿವರು ಈ ವಿಷಯದಲ್ಲಿ ಅಧಿಕಾರಿಗಳು ಹೇಳಿದ್ದನ್ನೇ ಹೇಳಿದರೆ ನಾವು ಯಾವ ತರಹ ನಂಬುವುದು? ನಷ್ಟಕ್ಕೊಳಗಾಗಿ